# ಕಲಾವಿದರಿಗೆ ಕಾಲದ ಪರಿವೆ ಇಲ್ಲ



## ಮಾನಸ ಜೋಷಿ

### ಸ್ಟಾರ್ ಸುವರ್ಣದ 'ಶ್ರೀ'ಯ ಮಾಲಾ

★ *ಹಗಲು, ರಾತ್ರಿ ದುಡಿಯುವ ಈ ದಿನಗಳು ಹೇಗಿವೆ?*

ಮೈಸೂರು ಮತ್ತು ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಯುವುದರಿಂದ ಓಡಾಟ ಇದೆ. ಹೊಸ ಧಾರಾವಾಹಿ ಆಗಿದ್ದರಿಂದ ಒತ್ತಡ ಹೆಚ್ಚಿದೆ. ಬೆಳಿಗ್ಗೆ ಎಂಟರಿಂದ ರಾತ್ರಿ ಎರಡರ ತನಕ ನಮ್ಮ ತಂಡ ಶ್ರಮಿಸುತ್ತಿದೆ. 'ಮಹಾದೇವಿ'ಯಲ್ಲೂ ನಟಿಸುತ್ತಿದ್ದೇನೆ. ಪ್ರತಿ ಶುಕ್ರವಾರ ಮತ್ತು ಗುರುವಾರ ನನ್ನ ಕಥಕ್ ಅಭ್ಯಾಸ ಇರುವುದರಿಂದ ಬೇರೆ ಯಾವ ಕೆಲಸವೂ ಆಗುವುದಿಲ್ಲ. ಆದರೆ ಒಬ್ಬ ಕಲಾವಿದೆಯಾಗಿ ಇದನ್ನು ಖುಷಿಯಿಂದ ಅನುಭವಿಸುತ್ತಿದ್ದೇನೆ. ಎಷ್ಟೇ ಒತ್ತಡ ಇದ್ದರೂ ಲವಲವಿಕೆ ಕಳೆದುಕೊಳ್ಳುವುದಿಲ್ಲ.

★ *ನಿಮ್ಮ ಕನಸು ಏನಾಗಿತ್ತು?*

ಬಾಲ್ಯದಿಂದಲೂ ನಾನು ವೈದ್ಯ– ಎಂಜಿನಿಯರ್ ಆಗಬೇಕು ಎಂದುಕೊಂಡಿಲ್ಲ. ಕಲೆಯಲ್ಲಿ ಓದಿದೆ. ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಷನ್ ಪಿಜಿ ಮಾಡಿದೆ. ಪತ್ರಕರ್ತಳಾಗಬೇಕಾದ ನಾನು ನಟನೆಯನ್ನು ಅಧ್ಯಯನ ಮಾಡಬೇಕೆಂದು ನಿರ್ಧರಿಸಿದೆ. ಮುಂಬೈನಲ್ಲಿರುವ ಅನುಪಮ್ ಖೇರ್ ಅವರ ಸಂಸ್ಥೆಯಲ್ಲಿ ನಟನೆಯ ತರಬೇತಿ ಪಡೆದೆ. ಮೂರು ತಿಂಗಳ ಶಿಸ್ತು ಬದ್ಧ ಅಧ್ಯಯನದ ನಂತರ ಸಿನಿಮಾ, ರಂಗಭೂಮಿ, ಟಿವಿ ನಟನೆ ಬಗ್ಗೆ ನನಗೊಂದು ಕಲ್ಪನೆ ಬಂತು. ಅಲ್ಲಿಂದ ಬಂದ ನಂತರ ರಂಗಭೂಮಿಯಲ್ಲಿ ತೊಡಗಿದೆ. ನಂತರ 'ಬಹುಪರಾಕ್' 'ಕಿರುಗೂರಿನ ಗಯ್ಯಾಳಿಗಳು' 'ಲಾಸ್ಟ್ ಬಸ್ ಸ್ಟಾಪ್' 'ಕಾಫಿ ಹೌಸ್' ಸಿನಿಮಾಗಳಲ್ಲಿ ನಟಿಸಿದೆ. ಅಷ್ಟರಲ್ಲಿ 'ಮಹಾದೇವಿ'ಯಲ್ಲಿ ದೇವಿ ಪಾತ್ರಕ್ಕೆ ಅವಕಾಶ ನನ್ನನ್ನೇ ಹುಡುಕಿ ಬಂದಿದ್ದರಿಂದ ಕಿರುತೆರೆಗೂ ಬಂದಂತೆ ಆಯಿತು.

★ *ಬಣ್ಣ ಹಚ್ಚಿದ ಆರಂಭದ ದಿನಗಳು ಹೇಗಿದ್ದವು?*

ನಾನು ಹತ್ತನೇ ತರಗತಿಯಲ್ಲಿದ್ದಾಗಲೇ 'ಈಶ್ವರ ಅಲ್ಲಾ ತೆರೆನಾಮ್' ಎಂಬ ದೂರದರ್ಶನದ ಧಾರಾವಾಹಿಯಲ್ಲಿ ಚಿಕ್ಕ ಪಾತ್ರ ನಿರ್ವಹಿಸಿದ್ದೆ. 'ಈ' ಟಿವಿ ನಡೆಸಿದ 'ಮಿಸ್ ಈಟಿವಿ' ಸ್ಪರ್ಧೆಯಲ್ಲಿ ನಾನು ವಿಜಯಗಳಿಸಿದ್ದೆ. ಇದನ್ನು ಹೊರತಾಗಿ 18 ವರ್ಷಗಳಿಂದ ಕಥಕ್ ಅಭ್ಯಾಸ ಮಾಡುತ್ತಿದ್ದರಿಂದ ನನಗೆ ಭಯ ಎನ್ನುವುದು ಇರಲೇ ಇಲ್ಲ. ತಳಮಳವಂತೂ ಆರಂಭದ ದಿನಗಳಲ್ಲಿ ಇತ್ತು. ಕಾಲ ಕ್ರಮೇಣ ನನ್ನಲ್ಲಿ ಆತ್ಮವಿಶ್ವಾಸ ಬಂದಿದ್ದರಿಂದ ಅದೆಲ್ಲಾ ಇಲ್ಲದಂತಾಯಿತು. ನೃತ್ಯ ಅಭಿನಯಕ್ಕೂ, ನಟನೆ ನಾಟ್ಯಕ್ಕೂ ಸಹಕರಿಸಿವೆ.

★ *ಸಮಯವನ್ನು ಹೇಗೆ ನಿಭಾಯಿಸುತ್ತೀರಿ?*

ಕಲಾವಿದರಿಗೆ ವರವೋ ಶಾಪವೋ ಗೊತ್ತಿಲ್ಲ. ಎಷ್ಟೇ ದಣಿದಿದ್ದರೂ ಕ್ಯಾಮೆರಾ ಎದುರಾದ ತಕ್ಷಣ ಆ ದಣಿವು ಕಾಣಿಸಿಕೊಳ್ಳುವುದೇ ಇಲ್ಲ. ನನಗೂ ಅಭ್ಯಾಸ ಆಗಿದೆ. ಅಭಿನಯ– ನಾಟ್ಯದಲ್ಲಿ ಮುಳುಗಿದರೆ ಸಮಯದ ಪರಿವೆ ಇಲ್ಲದಂತೆ ಭಾಗಿಯಾಗುತ್ತೇನೆ. ಇದಕ್ಕೆ ನಮ್ಮ ತಂದೆ– ತಾಯಿ ಹೊಂದಿಕೊಂಡಿದ್ದರು. ಈಗ ನನ್ನ ಪತಿ ಕೂಡ ಕಲಾವಿದರ ಸಮಯ ಅಭಾವವವನ್ನು ಅರ್ಥಮಾಡಿಕೊಂಡು ಪ್ರೋತ್ಸಾಹಿಸುತ್ತಾರೆ. ಕೆಲವೊಮ್ಮೆ ಸಂಪೂರ್ಣ ಆರಾಮಾಗಿಯೇ ಇರುತ್ತೇವೆ. ಆಗೆಲ್ಲ ವೈಯಕ್ತಿಕ ಕಾರ್ಯಗಳನ್ನು ಮಾಡಿಕೊಳ್ಳುತ್ತೇವೆ. ಕೆಲವೊಮ್ಮೆ ಒಂದು ಕ್ಷಣ ಸಿಕ್ಕರೆ ಸಾಕು ಎನ್ನುವಷ್ಟು ಕೆಲಸ ಇರುತ್ತವೆ. ಇದು ಸಹಜ ಎಂದೇ ನಾನು ಭಾವಿಸಿದ್ದೇನೆ.

★ *ಹೊಸ ತಲೆಮಾರಿನ ಯುವಕರಿಗೆ ಬಣ್ಣದ ಲೋಕದ ಬಾಗಿಲು ತೆರೆಯುತ್ತಾ?*

ನನ್ನ ತಂದೆ ಮಹೇಶ್ ಜೋಷಿ. ನನಗೆ ಆರಂಭದಲ್ಲಿ ತುಂಬಾ ಜನ ಹೇಳ್ತಾ ಇದ್ರು 'ನಿನಗೇನು ಬಿಡಮ್ಮ, ನಿಮ್ಮ ಅಪ್ಪ ಹೇಗಿದ್ದರೂ ಮೀಡಿಯಾದಲ್ಲಿ ಇದ್ದಾರೆ. ನಿನಗೆ ಏನು ತೊಂದರೆ ಇಲ್ಲ' ಆದರೆ ಅದಕ್ಕೆ ನನ್ನ ಉತ್ತರ: ನನ್ನ ಬದಲು ನಮ್ಮಪ್ಪ ಡಾನ್ಸ್ ಮಾಡುವುದಿಲ್ಲ, ನಟನೆ ಮಾಡುವುದಿಲ್ಲ. ವೀಕ್ಷಕರೂ ಕಲಾ ರಸಿಕರೆ, ಸತ್ವ ಇದ್ದರೆ ನೆಲೆ ನಿಲ್ಲುತ್ತೇನೆ. ಇದು ಎಲ್ಲರಿಗೂ ಅನ್ವಯ ಆಗುತ್ತದೆ. ಪ್ರತಿಭೆಯನ್ನು ಪ್ರದರ್ಶಿಸಿದರೆ ಎಲ್ಲರಿಗೂ ಅವಕಾಶ ಇದೆ.

■ ರಾಘವೇಂದ್ರ